**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:1467/2023**

**ಪಿರ್ಯಾದುದಾರರು:** : ರಾಜ್ಯ ಸರ್ಕಾರ,
ಪೊನ್ನಂಪೇಟೆ ಪೋಲೀಸ್ ಠಾಣೆ,

**ವಿರುದ್ಧ**

**ಆರೋಪಿಗಳು:** ಶ್ರೀಮತಿ ಕಾತ್ಯಾಯಿನಿ,
ಗಂಡ: ಪೌತಿ ಅಂತೋಣಿ,
ಪ್ರಾಯ: 58 ವರ್ಷ,
ವಾಸ: ಹಳ್ಳಿಗಟ್ಟು ಗ್ರಾಮ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ ಸಂಖ್ಯೆ - 1 :** ಇದುವರೆವಿಗೂ ಅಭಿಯೋಜನೆ ಪರ ಸಾಕ್ಷ್ಯ ನುಡಿದ ಸಾಕ್ಷಿಗಳ ಸಾಕ್ಷ್ಯವನ್ನು ಆಲಿಸಿದ್ದೀರಾ?

ಉ: ಕೇಳಿದ್ದೇನೆ.

**ಪ್ರಶ್ನೆ ಸಂಖ್ಯೆ - 2.** ಪ್ರಾ.ಸಾ.1/ಚಾ.ಸಾ.1 ಶ್ರೀಮತಿ ರಮ್ಯ ಆರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ. 02.10.2023 ರಂದು ಆರೋಪಿಯು ಹಳ್ಳಿಗಟ್ಟು ಗ್ರಾಮದಲ್ಲಿ ಪರವಾನಗಿ ಇಲ್ಲದೆ ಮದ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿರುತ್ತದೆ. ಅದರಂತೆ ಅವರು ಅವರ ತನಿಖಾಧಿಕಾರಿ ಚಾಸಾ 12 ರವರಿಗೆ ಲಿಖಿತ ದೂರನ್ನು ಕೊಟ್ಟಿರುತ್ತಾರೆ. ಪ್ರ.ವ. ವರದಿ ದಾಖಲಿಸಿದ ನಂತರ ಚಾಸಾ 12 ರವರು ಪಂಚರಾದ ಚಾಸಾ 4 ಮತ್ತ 5 ಜೊತೆಯಾಗಿ ಕೃತ್ಯ ನಡೆದ ಸ್ಥಳಕ್ಕೆ 03.50 ಕ್ಕೆ ಹೋಗಿ ದಾಳಿ ಮಾಡಿದಾಗ, ಆರೋಪಿಯಾದ ತಮ್ಮ ಮನೆಯ ಒಂದು ಕೋಣೆಯಲ್ಲಿ ಮಂಚದ ಕೆಳಗಡೆ 2 ರಟ್ಟಿನ ಬಾಕ್ಸ್ ಗಳಲ್ಲಿ 90 M.L. Original choice deluxe brandy ಯ 103 tetra packet ಗಳು, 90 M.L. Original choice deluxe whiskey 22 ಟೆಟ್ರಾ ಪ್ಯಾಕೇಟ್‌ಗಳು ಇರುತ್ತವೆ. ಆರೋಪಿಯಾದ ನೀವು ಪರವಾನಗಿ ಇಲ್ಲದೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಶೇಖರಿಸಿರುವ ಬಗ್ಗೆ ಹೇಳಿರುತ್ತೀರಿ, ನಂತರ ಮಾರಾಟ ಮಾಡಿ ಬಂದ ಹಣ ರೂ. 250/- ಮಂಚದ ಕೆಳಗಿನಿಂದ ಹಾಜರುಪಡಿಸಿದ ನಂತರ ಮಹಜರ್ ಮೂಲಕ ಇವುಗಳನ್ನು ವಶಪಡಿಸೊಂಡಿರುತ್ತಾರೆ. ಮಹಜರ್ ಅನ್ನು ಚಾಸಾ 12 ರವರು ಹೇಳಿದಂತೆ ಬರೆದಿರುವುದಾಗಿ ಸಾಕ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉ: ಸುಳ್ಳು

**ಪ್ರಶ್ನೆ ಸಂಖ್ಯೆ - 3.** ಪ್ರಾ.ಸಾ.2/ಚಾ.ಸಾ.3 ಬಾಳಪ್ಪ ನಾಯಕ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ. 02.10.2023 ರಂದು ಚಾಸಾ 1 ರವರಿಗೆ ಆರೋಪಿಯು ಹಳ್ಳಿಗಟ್ಟು ಗ್ರಾಮದಲ್ಲಿ ಪರವಾನಗಿ ಇಲ್ಲದೆ ಮದ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದ ವಿಚಾರವನ್ನು ಚಾಸಾ 1 ರವರು ತನಿಖಾಧಿಕಾರಿ ಚಾಸಾ 12 ರವರಿಗೆ ಲಿಖಿತ ದೂರನ್ನು ಕೊಟ್ಟಿರುತ್ತಾರೆ. ಪ್ರ.ವ. ವರದಿ ದಾಖಲಿಸಿದ ನಂತರ ಚಾಸಾ 12 ರವರು ಪಂಚರು ಮತ್ತು ಸಿಬ್ಬಂದಿಗಳ ಜೊತೆಗೂಡಿ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಮನೆಯನ್ನು ಶೋಧನೆ ಮಾಡಿದಾಗ

ಮನೆಯ ಒಂದು ಕೋಣೆಯಲ್ಲಿ ಮಂಚದ ಕೆಳಗಡೆ 2 ರೆಟ್ಟಿನ ಬಾಕ್ಸ್ ಗಳಲ್ಲಿ ಆರೋಪಿಯಾದ ನೀವು 90 M.L. Original choice deluxe brandy, 103 ಟೆಟ್ರಾ ಪ್ಯಾಕೇಟ್‌ಗಳು, 90 M.L. Original choice deluxe whiskey 22 ಟೆಟ್ರಾ ಪ್ಯಾಕೇಟ್‌ಗಳನ್ನು ಪರವಾನಗಿ ಇಲ್ಲದೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಶೇಖರಿರಿಸಿಟ್ಟಿರುತ್ತೀರಿ. ನಂತರ ಮಹಜರ್ ಮೂಲಕ ಸದರಿ ಪ್ಯಾಕೇಟ್‌ಗಳನ್ನು ವಶಪಡಿಸಿಕೊಂಡು ಮಹಜರ್ ಕ್ರಮ ಜರುಗಿಸಿ ತಾನೂ ಸಹಿ ಹಾಕಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ [signature]

**ಪ್ರಶ್ನೆ ಸಂಖ್ಯೆ - 4.** ಪ್ರಾ.ಸಾ.4/ಚಾ.ಸಾ.2 ಪ್ರಸನ್ನಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ. 02.10.2023 ರಂದು ಚಾಸಾ 1 ರವರಿಗೆ ಆರೋಪಿಯಾದ ನೀವು ಹಳ್ಳಿಗಟ್ಟು ಗ್ರಾಮದಲ್ಲಿ ಪರವಾನಗಿ ಇಲ್ಲದೆ ಮದ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದ ವಿಚಾರವನ್ನು ಚಾ,ಸಾ.1 ರವರು ತನಿಖಾಧಿಕಾರಿ ಚಾಸಾ 12 ರವರಿಗೆ ಲಿಖಿತ ದೂರನ್ನು ಕೊಟ್ಟಿರುತ್ತಾರೆ. ನಂತ ಪ್ರ.ವ. ವರದಿ ದಾಖಲಿಸಿದ ನಂತರ ಚಾಸಾ 12 ರವರು ಹೇಳಿದಂತೆ ತಾವು ಪಂಚರ ಜೊತೆ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ಮನೆಯನ್ನು ಶೋಧನೆ ಮಾಡಿದಾಗ ಆರೋಪಿಯಾದ ನೀವು 90 M.L. Original choice deluxe brandy, 103 ಟೆಟ್ರಾ ಪ್ಯಾಕೇಟ್‌ಗಳು ಮತ್ತು 90 M.L. Original choice deluxe whiskey 22 ಟೆಟ್ರಾ ಪ್ಯಾಕೇಟ್‌ಗಳನ್ನು ಪರವಾನಗಿ ಇಲ್ಲದೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಶೇಖರಿಸಿಟ್ಟಿರುತ್ತೀರಿ. ನಂತರ ಮಹಜರ್ ಮೂಲಕ ಸದರಿ ಪ್ಯಾಕೇಟ್‌ಗಳನ್ನು ವಶಪಡಿಸಿಕೊಂಡಿರುತ್ತಾರೆ. ಮಹಜರ್ ವೇಳೆ ಫೋಟೋಗಳನ್ನು ತೆಗೆದಿರುತ್ತಾರೆ. ಇಲಾಖಾ ಕ್ಯಾಮರಾ ದಿಂದ ತೆಗೆದ ಫೋಟೋಗಳನ್ನು ಕಚೇರಿಯಲ್ಲಿ Canon Printer ನಲ್ಲಿ Print ಮಾಡಿಸಿ ತನಿಖಾಧಿಕಾರಿ ಚಾಸಾ 12 ರವರಿಗೆ ಕೊಟ್ಟಿದ್ದು ಆ ಬಗ್ಗೆ ಚಾಸಾ 12 ರವರರಿಗೆ ಹೇಳಿಕೆ ಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ [signature]

**ಪ್ರಶ್ನೆ ಸಂಖ್ಯೆ - 5.** ಪ್ರಾ.ಸಾ.5/ಚಾ.ಸಾ.12 ನವೀನ್ ಜಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ. 02.10.2023 ರಂದು ಸಮಯ 15.15 ನಿಮಿಷಕ್ಕೆ ಚಾಸಾ 1 ರವರು ಆರೋಪಿಯಾದ ನೀವು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ನೀಡಿದ ದೂರನ್ನು ಹೊಂದಿಕೊಂಡು ಪ್ರ.ವ.ವರದಿ ದಾಖಲಿಸಿರುತ್ತಾರೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ. ನಂತರ ತನಿಖೆ ಮುಂದುವರೆಸಿ ಪಂಚರ ಜೊತೆ ಕೃತ್ಯ ಸ್ಥಳಕ್ಕೆ ತೆರಳಿ ಆರೋಪಿಯಾದ ತಮ್ಮ ಮನೆಯನ್ನು ಶೋಧನೆ ಮಾಡಿದಾಗ ಮಂಚದ ಕೆಳಗೆ ಇಟ್ಟಿದ್ದ ಬಾಕ್ಸ್ ಗಳಲ್ಲಿ 90 M. L. ನ Original choice deluxe VOSP Indian Brandy ಎಂದು ಬರೆದಿರುವ 103 ಪ್ಯಾಕೆಟ್‌ಗಳು ಮತ್ತು ಮತ್ತೊಂದು ರೆಟ್ಟಿನ ಬಾಕ್ಸ್ ನಲ್ಲಿ 90 M. L. ನ Original choice deluxe Indian Whisky ಎಂದು ಬರೆದಿರುವ 22ಪ್ಯಾಕೆಟ್‌ಗಳು

ಕಂಡು ಬಂದಿದ್ದು, ಅವುಗಳನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲು ಮಾಡಿ ವಶಪಡಿಸಿಕೊಂಡಿರುತ್ತಾರೆ. ಮಹಜರ್ ಅನ್ನು ಸಮಯ ಸಂಜೆ 04.00ರಿಂದ 06.00 ತನಕ ಜರುಗಿಸಿ ನಂತರ ಠಾಣೆಗೆ ಬಂದು ಚಾಸಾ 1 ರವರಿಗೆ ತನಿಖೆ ಮುಂದವರೆಸುವಂತೆ ಕಡತವನ್ನು ವರ್ಗಾಯಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ - 6.** ಪ್ರಾ.ಸಾ.6/ಚಾ.ಸಾ.13 ಪ್ರಮೀಳಾ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ02.10.2023 ರಂದು ಠಾಣಾ ಉಸ್ತುವಾರಿಯಲ್ಲಿರುವಾಗ, ಚಾ.ಸಾ.12 ರವರು ಆರೋಪಿ ಮತ್ತು ಸ್ವತ್ತುಗಳೊಂದಿಗೆ ಠಾಣೆಗೆ ಹಾಜರಾಗಿ ಹಾಜರು ಪಡಿಸಿರುತ್ತಾರೆ. ನಂತರ ಚಾ,ಸಾ.13 ರವರು ಅವುಗಳನ್ನು ಮಾಲುಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇನಿಸಿಕೊಂಡಿರುತ್ತಾರೆ. ನಂತರ ಪಂಚರಾದ ಸಾಕ್ಷಿ 4 ಮತ್ತು 5 ರವರ ಹಾಗೂ ಇತರ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತಾರೆ. ದಿಃ10.10.2023 ರಂದು ಸ್ವತ್ತುಗಳನ್ನು RFSL ಮೈಸೂರಿಗೆ ಕಳುಹಿಸಿ, ದಿಃ13.10.2023 ರಂದು ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ. ದಿಃ08.11.2023 ರಂದು ಪಿ.ಡಿ.ಒ ರವರಿಗೆ ಆರೋಪಿಯ ವಾಸಸ್ಥಳ ದೃಢೀಕರಣ ಪತ್ರ ಕೋರಿ ಮನವಿ ಸಲ್ಲಿಸಿ ಅದೇ ದಿನ ವರದಿ ಪಡೆದುಕೊಂಡಿರುತ್ತಾರೆ ನಂತರ ದಿಃ13.11.2023 ರಂದು ಆರೋಪಿಯಾದ ತಮ್ಮ ವಿರುದ್ಧ ಆರೋಪ ಸಾಬೀತಾದ ಕಾರಣ ನಿಮ್ಮ ವಿರುದ್ಧ ಅಂತಿಮ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ -7 :** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ

**ಪ್ರಶ್ನೆ ಸಂಖ್ಯೆ -8 :** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ

(ತೆರೆದ ನಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆರೋಪಿಯು ನೀಡಿದ ಉತ್ತರಗಳನ್ನು ದಿಃ9-6-2026 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು).

9-6-2026

ಸ್ಥಳಃ ಪೊನ್ನಂಪೇಟೆ
ದಿಃ9.6.2026.

ಶ್ರೀನಾಥ್ ಎ
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.
ಪೊನ್ನಂಪೇಟೆ.